# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 650
2. ಸದಸ್ಯರ ಹೆಸರು : ಶ್ರೀ ಆರ್.ಬಿ.ತಿಮ್ಮಾಪುರ
   (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 04.03.2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು

| ವಿಷಯ | ಉತ್ತರ |
|---|---|
| (ಅ) ರಾಜ್ಯದ ಖಜಾನೆ ಇಲಾಖೆಯಲ್ಲಿರುವ ದಾಖಲಾತಿಗಳನ್ನು ಸಂಗ್ರಹಿಸಿ ಸಂರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | (i) ರಾಜ್ಯ ಖಜಾನೆಗಳಲ್ಲಿ ಕಡತಗಳನ್ನು ನಾಶಪಡಿಸುವಿಕೆಯ ಕುರಿತು ಕರ್ನಾಟಕ ಖಜಾನೆ ಸಂಹಿತೆ ಅನುಚ್ಛೇದ 32ರಲ್ಲಿ ವಿವರವಾದ ಸೂಚನೆಗಳನ್ನು ನೀಡಿದ್ದು, ಸದರಿ ಅನುಚ್ಛೇದದಲ್ಲಿ ನೀಡಿರುವ ಸೂಚನೆಗಳಂತೆ ಅಪೆಂಡಿಕ್ಸ್ V ರಲ್ಲಿ ನಿಗದಿಪಡಿಸಿರುವ ಅವಧಿಯವರೆಗೆ ಮುದ್ರಿತ ದಾಖಲೆಗಳನ್ನು ನಿರ್ವಹಿಸಲಾಗುತ್ತಿದೆ.<br>(ii) ಖಜಾನೆ-2ರಲ್ಲಿ ಆರ್ಥಿಕ ವಹಿವಾಟುಗಳನ್ನು ನಿರ್ವಹಿಸುತ್ತಿದ್ದು, ಡಿಜಿಟಲೈಸ್ಡ್ ದತ್ತಾಂಶವನ್ನು ಸಹ ಖಜಾನೆ-2 ದತ್ತಾಂಶ ಕೇಂದ್ರದಲ್ಲಿ ಸಂಗ್ರಹಿಸಿ ನಿರ್ವಹಿಸಲಾಗುತ್ತಿದೆ. |
| (ಆ) ಇದಕ್ಕಾಗಿ ರೂಪಿಸಿರುವ ಕಾರ್ಯಯೋಜನೆಗಳೇನು? (ವಿವರಗಳನ್ನು ಒದಗಿಸುವುದು) | (i) ಮುದ್ರಿತ ದಾಖಲೆಗಳನ್ನು ಖಜಾನೆಗಳಲ್ಲಿ ನಿರ್ವಹಿಸಲು ಮೂಲಭೂತ ಸೌಕರ್ಯವನ್ನು (ಅಭಿಲೇಖಾಲಯಗಳು) ಒದಗಿಸಲಾಗಿದೆ.<br>(ii) ಡಿಜಿಟಲೈಸ್ಡ್ ದತ್ತಾಂಶವನ್ನು ಖಜಾನೆ-2 ದತ್ತಾಂಶ ಕೇಂದ್ರದಲ್ಲಿ (DATA Centre) ಸಂಗ್ರಹಿಸಲಾಗುತ್ತಿದೆ.<br>(iii)ನೈಜ ಸಮಯದಲ್ಲಿ ಖಜಾನೆ-2ರ ದತ್ತಾಂಶ ಕೇಂದ್ರದಲ್ಲಿನ ಡಾಟಾವನ್ನು ಡಿ.ಆರ್. ಸೈಟ್ (Disaster Recovery)ನಲ್ಲಿ ದಾಖಲಿಸಲಾಗುತ್ತಿದೆ.<br>(iv)ದಿನಾಂತ್ಯದಲ್ಲಿ ದತ್ತಾಂಶದ ಬ್ಯಾಕ್‌ಅಪ್ ಅನ್ನು ಟೇಪುಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ.<br>(v)ದತ್ತಾಂಶದ ಪ್ರವೇಶಾವಕಾಶವನ್ನು (Access) ಆಡಳಿತದಾರರಿಗೆ ಮಿತಿಗೊಳಿಸಲಾಗಿದೆ. |

ಸಂಖ್ಯೆ: ಆಇ 32 ಆಖಇ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ